

# ಸಗಣಿಯಾದರೇನು ಶಿವ...

ಮನೆ ಹಿತ್ತಲಲ್ಲಿ ಸುಮ್ಮನೆ ಸಾಗುತ್ತಿದ್ದೆ. ಅಲ್ಲೇ ಇದ್ದ ಸಗಣಿ ತಿಪ್ಪೆ ಬಳಿ, ಪುಟ್ಟ ಪುಟ್ಟ ಸಗಣಿ ಉಂಡೆಗಳು ಓಡಾಡುತ್ತಿರುವಂತೆ ಕಂಡವು. ಅಚ್ಚರಿಯಿಂದ ದಿಟ್ಟಿಸಿ ನೋಡಿದಾಗ, ಎರಡು ಜೀರುಂಡೆಗಳು ಆ ಸಗಣಿ ಉಂಡೆಗಳನ್ನು ಹೊತ್ತು ಸಾಗುತ್ತಿರುವ ದೃಶ್ಯ ಕಂಡಿತು.

ಈ ಜೀರುಂಡೆಗಳಿಗೆ 'ಸಗಣಿ ಜೀರುಂಡೆ' ಎಂದು ಕರೆಯುತ್ತಾರೆ. ಇಂಗ್ಲಿಷ್‌ನಲ್ಲಿ 'ಡಂಗ್ ಬೀಟಲ್' ಎನ್ನುತ್ತಾರೆ. ಇವು ಸಂಧಿಪದಿ ವಂಶದ ಸ್ಕಾರ್‌ಬೇಡಿ ಕುಟುಂಬಕ್ಕೆ ಸೇರಿವೆ. ಇವುಗಳಲ್ಲಿ ಸ್ಕಾರ್ ಬಿನಿ ಮತ್ತು ಎಫೋಡಿನಿ ಎಂಬ ಎರಡು ಉಪ ಕುಟುಂಬಗಳಿವೆ. ಸುಮಾರು ಮೂರು ಕೋಟಿ ವರ್ಷಗಳಿಂದಲೂ ಈ ಜೀರುಂಡೆಗಳು ಭೂಮಿ ಮೇಲೆ ಅಸ್ತಿತ್ವದಲ್ಲಿವೆಯಂತೆ.

'ಸಗಣಿ ಜೀರುಂಡೆ'ಗಳು 3 ಸೆಂ.ಮೀ. ಉದ್ದ, 2 ಸೆಂ.ಮೀ. ಅಗಲದವರೆಗೆ ಮಾತ್ರ ಬೆಳೆಯಬಲ್ಲವು. ಅಂಟಾರ್ಕ್ಟಿಕಾ ಹೊರತುಪಡಿಸಿ ಜಗತ್ತಿನ ಎಲ್ಲ ಭೂಖಂಡಗಳ ಅರಣ್ಯ, ಹುಲ್ಲುಗಾವಲು, ಮರುಭೂಮಿ ಎಲ್ಲೆಲ್ಲೂ ಕಂಡುಬರುವ ಜೀರುಂಡೆಗಳಿವು. ಪ್ರಾಣಿಗಳು ವಿಸರ್ಜಿಸಿದ ಮಲ, ಕೊಳೆತ ಎಲೆಗಳೆಂದರೆ ಇವಕ್ಕೆ ಇಷ್ಟ. ಇದನ್ನು ಬಿಟ್ಟು ಬೇರೇನನ್ನೂ ತಿನ್ನುವುದಿಲ್ಲ; ಕುಡಿಯುವುದಿಲ್ಲ.

## ಸಗಣಿ ಭಕ್ಷಕ

ಈ ಜೀರುಂಡೆಗಳು ಸಗಣಿ ಭಕ್ಷಕ. ಪ್ರಾಣಿಗಳು ವಿಸರ್ಜಿಸಿದ ಮಲವನ್ನು ಸೇವಿಸಿ ಬದುಕುತ್ತವೆ. ಎಲ್ಲ ಸಗಣಿ ಭಕ್ಷಕ ಜೀರುಂಡೆಗಳು ಪ್ರಾಣಿಗಳು ವಿಸರ್ಜಿಸಿದ ಮಲವನ್ನು ಮಾತ್ರ ಸೇವಿಸುತ್ತವೆ ಎಂದಲ್ಲ; ಮಾಂಸಾಹಾರಿಗಳ ವಿಸರ್ಜನಾ ವಸ್ತುವು ಇವಕ್ಕೆ ಸುಲಭವಾಗಿ ಜೀರ್ಣವಾಗುವುದಿಲ್ಲ. ಆದ ಕಾರಣ ಸಸ್ಯಾಹಾರಿಗಳ ಜೀರ್ಣವಾಗದ ಸಸ್ಯದ ಉಳಿಕೆಯನ್ನು ಇವು ಇಷ್ಟಪಡುತ್ತವೆ.

**ಆಹಾರಕ್ಕಾಗಿ ಸಗಣಿಯನ್ನು ಉಂಡೆ ಮಾಡಿ ಸಾಗಿಸುವ ಈ ಜೀರುಂಡೆಗಳು ಶ್ರಮಜೀವಿಗಳು. ಇವು ತಮ್ಮ ತೂಕಕ್ಕಿಂತ 50 ಪಟ್ಟು ಹೆಚ್ಚಿನ ತೂಕದ ಸಗಣಿ ಉಂಡೆಯನ್ನು ತಳ್ಳುತ್ತವೆಯಂತೆ!**

■ ಪ್ರಕಾಶ ಎಸ್. ಮನ್ನಂಗಿ

ಸಗಣಿ ಭಕ್ಷಕ ಜೀರುಂಡೆಗಳು ಸಗಣಿಯನ್ನು ಗೋಲಾಕಾರದಲ್ಲಿ ರಚಿಸಿ ನೆಲದ ಮೇಲೆ ಉರುಳಿಸುತ್ತ ಸಾಗುತ್ತವೆ ಎಂದೇ ನಾವು ಭಾವಿಸಿದ್ದೇವೆ. ಆದರೆ ಕೆಲವು ಎಫೋಡಿಯನ್ ಸಗಣಿ ಭಕ್ಷಕ ಜೀರುಂಡೆಗಳು, ಉರುಳಿಸುತ್ತ ಶಕ್ತಿಯನ್ನೇಕೆ ವ್ಯಯ ಮಾಡುವುದೆಂದು ಆ ಸಗಣಿಯಲ್ಲೇ ಜೀವಿಸತೊಡಗಿವೆ. ಇನ್ನು ಕೆಲವು, ಸಗಣಿಯ ಕೆಳಗೆ ಸುರಂಗ ಕೊರೆದು ಅಲ್ಲಿಯೇ ಆಹಾರ ಸೇವಿಸುತ್ತಾ ಬದುಕುತ್ತವೆ.

ದೇಹದ ಹಿಂಭಾಗದಿಂದ, ಅದೂ ಹಿಂಗಾಲಿನಿಂದ ಸಗಣಿ ಉಂಡೆ ದೂಡುವುದು ಸುಲಭದ ಮಾತಲ್ಲ. ಹೀಗಾಗಿ ಕೆಲವು ಸಗಣಿ ಭಕ್ಷಕ ಜೀರುಂಡೆಗಳು ಉಂಡೆಯ ಮೇಲೇರಿ ಕುಳಿತು ಕುಣಿಕುಣಿದು ಅದು ಮುಂದಕ್ಕೆ ಚಲಿಸುವಂತೆ ಮಾಡುತ್ತವೆ. ಇದಕ್ಕೆ ಇನ್ನೂ ಒಂದು ಕಾರಣವಿದೆ. ಬಿಸಿಲಿನಲ್ಲಿ ಕಾದ ನೆಲದ ಝಳ ಕಾಲುಗಳಿಗೆ ತಾಗಬಾರದೆಂದು ಸಗಣಿ ಉಂಡೆ ಮೇಲೇರಿ ಪಯಣಿಸುತ್ತವೆ.

ಇವು ತಮ್ಮ ತೂಕಕ್ಕಿಂತ 50 ಪಟ್ಟು ಹೆಚ್ಚಿನ ತೂಕದ ಸಗಣಿ ಉಂಡೆಯನ್ನು ತಳ್ಳುತ್ತವೆ. ಒಂಥಾಫೇಗಸ್ ಟಾರಸ್ ಎಂಬ ಗಂಡು ಸಗಣಿ ಭಕ್ಷಕ ಜೀರುಂಡೆ ತನ್ನ ದೇಹ ತೂಕದ 1141 ಪಟ್ಟು ಹೆಚ್ಚಿನ ತೂಕದ ಸಗಣಿ ಉಂಡೆಯನ್ನು ದೂಡಬಲ್ಲದಂತೆ.

## ಉತ್ತಮ ಪೋಷಕರು!

ಈ ಜೀರುಂಡೆಗಳು ಮರಿಗಳಿಗೆ ಆಹಾರ ನೀಡಲು ಸಗಣಿ ಉಂಡೆಗಳನ್ನು ದೂಡಿಕೊಂಡು ಬರುತ್ತವೆ. ಜೊತೆಗೆ, ಈ ಸಗಣಿಯಿಂದಲೇ ಗೂಡು ರಚಿಸುತ್ತವೆ. ಇದರೊಳಗೆ ಹೆಣ್ಣು ಜೀರುಂಡೆ ತತ್ತಿಗಳನ್ನಿಡುತ್ತದೆ. ಲಾರ್ವಾಗಳು ಹೊರ ಬಂದಮೇಲೆ ಗೂಡಿನೊಳಗಿರುವ ಆಹಾರವನ್ನೇ ಅವು ಪಡೆಯುತ್ತವೆ.

ಹೆಣ್ಣು ಜೀರುಂಡೆ, ಮಾತೃವಾತ್ಸಲ್ಯ ತೋರಿಸುವುದರಲ್ಲಿ ಎತ್ತಿದ ಕೈ. ಮರಿಗಳಿಗೆ ಆಹಾರ ತಿನಿಸುವುದು, ಗೂಡು ಕಟ್ಟುವುದು ಹೆಣ್ಣಿನ ಜವಾಬ್ದಾರಿ. ಕೆಲವು ಸಗಣಿ ಭಕ್ಷಕ ಜೀರುಂಡೆಗಳಲ್ಲಿ ಹೆಣ್ಣು ಮತ್ತು ಗಂಡು ಕೆಲಸವನ್ನು ಹಂಚಿಕೊಂಡು ಮಾಡುತ್ತವೆ.

## ತಾಜಾ ಸಗಣಿಯೇ ರುಚಿಕರ

ಜೀವಿಗಳು ದೇಹಬಾಧೆ ತೀರಿಸಿಕೊಳ್ಳುವ ಸಮಯಕ್ಕಾಗಿ ಇವು ಕಾಯುತ್ತಿರುತ್ತವೆ. ಆನೆಯೊಂದು ಲದ್ದಿ ಹಾಕಿತೆಂದು ಭಾವಿಸೋಣ. ಕೇವಲ 15 ನಿಮಿಷಗಳಲ್ಲಿ 4000 ಜೀರುಂಡೆಗಳು ಸೇರಿದ್ದನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ಮುಂದೆ ಕೆಲವೇ ಸಮಯದಲ್ಲಿ 12 ಸಾವಿರ ಜೀರುಂಡೆಗಳು ಸೇರಿಕೊಂಡವಂತೆ!

ಜೀರುಂಡೆಗಳು ರೈತಸ್ನೇಹಿಗಳು ಕೂಡ. ಕೃಷಿಗೆ ಉಪಯುಕ್ತವಾದ ಸಗಣಿಯನ್ನು ನೆಲದಲ್ಲಿ ಹೂಳುವುದು, ಬಳಕೆ ಮಾಡುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in